**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ಸಂಖ್ಯೆಃ 1255-2016**

ಪಿರ್ಯಾದಿದಾರರು ಃ ಸರ್ಕಾರದ ಪರವಾಗಿ ಗಂಗೊಳ್ಳಿ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿ ಃ ಉಮೇಶ

**<u>ಮುಂದುವರೆದ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರಶ್ನೆಃ 1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2. ಪ್ರಾಸಾ 1: ರಮೇಶ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯ ಪರಿಚಯವಿದೆ. ನಿ.ಪಿ.9ರ ಸ್ವತ್ತು ಸ್ವಾಧೀನತಾ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ದಿಃ 06-07-2015 ರಂದು ತಾನು ಮತ್ತು ಪ್ರಾಸಾ-10 ರವರು ಠಾಣೆಗೆ ಹಾಜರಾಗಿದ್ದು, ಆರೋಪಿಯನ್ನು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಬಂಧಿಸಿದ್ದು ಆತನ ಮೊಬೈಲನ್ನು ಗಂಗೊಳ್ಳಿ ಠಾಣೆಯಲ್ಲಿ ವಶಕ್ಕೆ ಪಡೆಯುವ ವೇಳೆಗೆ ತಾನು ಹಾಜರು ಇದ್ದು ರಾತ್ರಿ 8-00 ರಿಂದ 8-30 ಗಂಟೆಯವರೆಗೆ ಪಂಚನಾಮೆ ಜರುಗಿಸಿ ತನ್ನ ಸಹಿ ಪಡೆದಿದ್ದು. ಅದು ಸ್ಯಾಂಸಂಗ್ ಮೊಬೈಲ್ ಇರಬಹುದು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಸ್ಯಾಂಸಂಗ್ ಮೊಬೈಲನ್ನು ನೋಡಿ ಗುರುತಿಸಿದ್ದು. ಅದನ್ನು ಮುಮಾ1 ಎಂದು, ಮೊಹರಿನ ಚೀಟಿಯಲ್ಲಿ ಇರುವ ಸಾಕ್ಷಿ ಸಹಿಯನ್ನು ಮುಮಾ1(ಎ) ಎಂದು ಗುರುತಿಸಲಾಯಿತು ಎಂದು ನುಡಿದಿರುತ್ತಾರೆ ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರಃ

ಪ್ರಶ್ನೆಃ 3. ನಿಮಗೆ ಹೆಚ್ಚಿಗೆ ಹೇಳುವುದು ಏನಾದರೂ ಇದೆಯಾ?

ಉತ್ತರಃ

ಪ್ರಶ್ನೆಃ 4 : ನಿಮ್ಮ ಪರವಾಗಿ ಸಾಕ್ಷಿಗಳಿದ್ದಾರ?

ಉತ್ತರಃ

ಮೇಲ್ಕಂಡ ಹೇಳಿಕೆಯನ್ನು ಆರೋಪಿ ನುಡಿದ ಶಬ್ದಗಳಲ್ಲಿಯೇ ದಾಖಲಿಸಿದ್ದು ಅದು ನಿಜ ಹಾಗೂ ಸತ್ಯಾಂಶಗಳಿಂದ ಕೂಡಿರುವುದಾಗಿ ಪ್ರಮಾಣೀಕರಿಸಿದೆ.

ಇಂದು ದಿನಾಂಕ 08 ನೇ ಡಿಸೆಂಬರ್ 2025.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.